**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 2 ಫ್ರಾ.ಸಾ. : 2**

ಸಾಕ್ಷಿಯ ಹೆಸರು : ಜಾನ್ ರತ್ನಾಕರ
ತಂದೆಯ ಹೆಸರು : ಸಿ.ಸಿ. ಮಿತ್ರಾ
ವಯಸ್ಸು : 65 ವರ್ಷ
ಉದ್ಯೋಗ : ನಿವೃತ್ತ ಸ್ವಚ್ಛತಾ ಮೇಸ್ತ್ರಿ / ಮೇಲ್ವಿಚಾರಕ, ಪುರಸಭೆ ಉಡುಪಿ
ವಾಸ : ಉಡುಪಿ

**ದಿನಾಂಕಃ 29-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ</u>**

1. ನಾನು 03.05.2010 ರಂದು ಉಡುಪಿಯ ನಗರಸಭೆಯ ಆಯುಕ್ತರು ಆದೇಶ ಮಾಡಿ ಪಂಚ ಸಾಕ್ಷಿಯನ್ನಾಗಿ ಲೋಕಾಯುಕ್ತರವರ ಕಚೇರಿಯವರ ಕೋರಿಕೆ ಮೇರೆಗೆ ಉಡುಪಿಯ ಲೋಕಾಯುಕ್ತ ಕಚೇರಿಗೆ ಮಧ್ಯಾಹ್ನ 2.00 ಗಂಟೆಗೆ ಹೋದೆ . ಅಲ್ಲಿ ಲೋಕಾಯುಕ್ತ ಅಧಿಕಾರಿ, ಸಿಬ್ಬಂದಿ, ಇನ್ನೊಬ್ಬ ಪಂಚರು ಇದ್ದರು . ಇನ್ನೊಬ್ಬ ಪಂಚರ ಹೆಸರು ಸದಾನಂದ ಶೆಟ್ಟಿ . ಲಂಚ ಪ್ರಕರಣದಲ್ಲಿ ಮಹಜರ್ ಮಾಡುವುದಕ್ಕಾಗಿ ನನ್ನನ್ನು ಪಂಚ ಸಾಕ್ಷಿಯನ್ನಾಗಿ ಕರೆದಿದ್ದರು . ಅದೇ ದಿನ ಲೋಕಾಯುಕ್ತ ಅಧಿಕಾರಿಯವರು ನನ್ನನ್ನು ಮತ್ತು ಇನ್ನೊಬ್ಬ ಪಂಚ ಹಾಗೂ ಅವರ ಸಿಬ್ಬಂದಿಯನ್ನು ಅವರ ಜೀಪಿನಲ್ಲಿ ಹೊನ್ನಾವರಕ್ಕೆ ಕರೆದುಕೊಂಡು ಬಂದರು . ರಾತ್ರಿ 10.00 ಗಂಟೆಗೆ ನಾವು ಹೊನ್ನಾವರ ಮುಟ್ಟಿದೆವು . ಮರುದಿವಸ ನನ್ನನ್ನು ಹೊನ್ನಾವರದ ಪರಿವೀಕ್ಷಣಾ ಮಂದಿರದಲ್ಲಿ ಕರ್ನಾಟಕ ಲೋಕಾಯುಕ್ತ ಅಧೀಕ್ಷಕರು ಅಲ್ಲಿಗೆ ಬಂದಿದ್ದು ಅವರನ್ನು ನನಗೆ ಪರಿಚಯ ಮಾಡಿದರು . ಯಾವ ವಿಷಯದ ಬಗ್ಗೆ ನಾನು ಪಂಚ ಆಗಿ ಇರಬೇಕು ಎಂದು ನನಗೆ ತಿಳಿಸಿದರು . ಸತ್ರ ನ್ಯಾಯಾಲಯದಿಂದ ಬಂದ ಶೋಧನಾ ವಾರೆಂಟನ್ನು ನನಗೆ ತೋರಿಸಿದರು . ಅಲ್ಲಿಂದ ಬೆಳಿಗ್ಗೆ 5.30 ಗಂಟೆಗೆ ನಮ್ಮನ್ನು ಕರೆದುಕೊಂಡು ಗೋಕರ್ಣ ಓಂ ಹೋಟೇಲ್ ಪಕ್ಕದಲ್ಲಿ ಗಜಮುಖ ಎಂಬ ಹೆಸರು ಇದ್ದ ಮನೆಯ ಗೇಟ್ ಮುಂದೆ ನಿಲ್ಲಿಸಿದರು . ಆಗ ನಮ್ಮ ಜೊತೆ ಬಂದಿದ್ದ ಲೋಕಾಯುಕ್ತ ಉಪಾಧೀಕ್ಷಕರು ಆ ಮನೆಯ ಬಾಗಿಲನ್ನು ಮುಚ್ಚಿದ್ದ ಕಾರಣ ಬೆಲ್ ಮಾಡಿದರು . ಆಗ ಮನೆಯ ಒಳಗಿನಿಂದ ಬಾಗಿಲನ್ನು ನಾಗರಾಜ ಎನ್ನುವವರು ತೆಗೆದರು . ಅವರಿಗೆ ಉಪಾಧೀಕ್ಷಕರು ಬಂದಿರುವ ಕಾರಣವನ್ನು ಸಂಕ್ಷಿಪ್ತವಾಗಿ ತಿಳಿಸಿದರು ಹಾಗೂ ಸಹಕಾರ

ಕೋರಿದರು . ಅದಕ್ಕೆ ನಾಗರಾಜರವರು ಒಪ್ಪಿದರು . ಆ ಬಗ್ಗೆ ಶೋಧನಾ ವಾರೆಂಟ್ ಮೇಲೆ ಅವರ ರುಜುವನ್ನು ಪಡೆದರು . ಮನೆಯಲ್ಲಿ ನಾಗರಾಜರವರ ಹೆಂಡತಿ ಸೀಮಾ ಮತ್ತು ಇಬ್ಬರು ಮಕ್ಕಳು ಇದ್ದರು . ನಾಗರಾಜ, ಅವರ ಹೆಂಡತಿ ಮತ್ತು ಮಕ್ಕಳ ಅಂಗಶೋಧನೆಯನ್ನು ಮಾಡಿದರು. ಅವರ ಬಳಿ ಯಾವುದೇ ತೊಂದರೆಯಾಗುವಂತಹ ವಸ್ತುಗಳು ಕಂಡು ಬರಲಿಲ್ಲ. ಅದು ಮೂರು ಅಂತಸ್ತಿನ ಮನೆಯಾಗಿತ್ತು . ಅದು ಆರ್ ಸಿ ಸಿ ಕಟ್ಟಡ ಆಗಿತ್ತು . ಅದು 8 ಗುಂಟೆ ಜಾಗದಲ್ಲಿ ಇತ್ತು . ಆ ಕಟ್ಟಡ ಸುಮಾರು 2000 ಚದರ ಅಡಿ ಇತ್ತು . ನಾಗರಾಜರವರೇ ಆ ವಿಷಯವನ್ನು ಹೇಳಿದರು . ಅವರ ಮನೆಯ ಅಂಗಳದಲ್ಲಿ ಹೂವಿನ ಪಾಟ್ ಗಳು , ತೆಂಗಿನ ಮರ, ಅಡಿಕೆ ಮರ, ಒಂದು ತೆಂಗಿನ ಕಾಯಿ ಹಾಕಲು ಮಾಡಿದ್ದ ಶೆಡ್ಡು , ಬಚ್ಚಲು ಮನೆ, ಒಂದು ಬಾವಿ ಇದ್ದವು . ಆ ಬಚ್ಚಲು ಮನೆಯಲ್ಲಿ ನೀರು ಕಾಯಿಸುವ ತಾಮ್ರದ ಹಂಡೆ, ನೀರು ಕಾಯಿಸುವ ವ್ಯವಸ್ಥೆ, ನಾಯಿ ಕಟ್ಟಿ ಹಾಕುವ ಕಬ್ಬಿಣದ ಗೂಡು, ಒಂದು ಜೀ ಎಂಬ ಹೆಸರಿನ ಹೆಣ್ಣು ನಾಯಿ ಇದ್ದವು . ಆ ಬಾವಿಗೆ ಮೋಟಾರ್ ಪಂಪ್ ಅಳವಡಿಸಿದ್ದರು . ಅಲ್ಲಿ ಒಂದು ತುಳಸಿ ಕಟ್ಟೆ ಇತ್ತು . ಅಲ್ಲಿ ಅಂಗಳಕ್ಕೆ ಟೈಲ್ಸ್ ಅಳವಡಿಸಲಾಗಿತ್ತು .

(ಈ ಹಂತದಲ್ಲಿ ಮೂಲ ಪಂಚನಾಮೆ ಕಡತದಲ್ಲಿ ಇಲ್ಲದೇ ಇರುವ ಕಾರಣ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.